ಕೊಳ್ಳೇಗಾಲ ಮತ್ತು ಯಳಂದೂರು ಕ್ಷೇತ್ರಗಳನ್ನು ಪೂರ್ಣ ನೀರಾವರಿ ಪ್ರದೇಶವೆಂದು ಘೋಷಣೆ ಮಾಡುವ ಬಗ್ಗೆ

2392(2823) ಶ್ರೀ ಜಿ.ಎನ್. ನಂಜುಂಡಸ್ವಾಮಿ (ಕೊಳ್ಳೇಗಾಲ) :— ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೊಳ್ಳೇಗಾಲ ಮತ್ತು ಯಳಂದೂರು ಕ್ಷೇತ್ರಗಳು ಹಲವು ಕೆರೆಗಳಿಂದ ಹಾಗೂ ಕಬಿನಿ ನಾಲೆಗಳಿಂದ ಸಂಪೂರ್ಣ ನೀರಾವರಿಯಾಗಿದ್ದರೂ ಸಹ ಸರ್ಕಾರ ಅರೆ ನೀರಾವರಿ ಪ್ರದೇಶವೆಂದು ಘೋಷಣೆ ಮಾಡಲಾಗಿದೆಯೇ;

ಆ) ಹಾಗಿದ್ದಲ್ಲಿ ಕಾರಣಗಳೇನು;

ಇ) ಈ ಕ್ಷೇತ್ರಗಳನ್ನು ಸಂಪೂರ್ಣ ನೀರಾವರಿ ಪ್ರದೇಶ ಎಂದು ಘೋಷಣೆ ಮಾಡಲು ಸರ್ಕಾರ ಕ್ರಮಕೈಕೊಳ್ಳುವುದೇ?

ಶ್ರೀ ಎಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು) :—

ಅ) ಹೌದು

ಆ) ಕಬಿನಿ ಜಲಾಶಯ ಯೋಜನೆ ಅನುಷ್ಠಾನಕ್ಕೆ ಮುನ್ನ ಕೊಳ್ಳೇಗಾಲ ಮತ್ತು ಯಳಂದೂರು ತಾಲ್ಲೂಕಿನಲ್ಲಿ ಮಳೆಯ ಆಧಾರಿತ ಒಳ ಹರಿವಿನಿಂದ ತುಂಬುತ್ತಿದ್ದ ಕೆರೆಗಳ ವ್ಯಾಪ್ತಿಯ ಅಚ್ಚುಕಟ್ಟು ಪ್ರದೇಶವನ್ನು ಕಬಿನಿ ಜಲಾಶಯ ಯೋಜನೆಯ ಅಡಿಯಲ್ಲಿ ಸೇರಿಸಿಕೊಂಡು ನಾಲೆಯ ಮುಖಾಂತರ ಅನುಮೋದಿತ ಯೋಜನಾ ವರದಿಯಂತೆ ಅರೆ ನೀರಾವರಿ ಬೆಳೆಗಳಿಗೆ ಖಾತರಿಯಾದ ನೀರು ಸರಬರಾಜು ಮಾಡಲಾಗುತ್ತಿದೆ. ಆದ್ದರಿಂದ ಸದರಿ ಅಚ್ಚುಕಟ್ಟನ್ನು ಅರೆ ನೀರಾವರಿ ಪ್ರದೇಶವೆಂದು ಘೋಷಿಸಲಾಗಿದೆ.

ಇ) ಅಚ್ಚುಕಟ್ಟುದಾರರ ಮನವಿಯ ಮೇರೆಗೆ ವಿತರಣಾ ನಾಲೆ 41ರಿಂದ 60ರವರೆವಿಗೂ ಪೂರ್ಣ ನೀರಾವರಿ ಬೆಳೆ ಪದ್ಧತಿಯ ಬದಲಾವಣೆ ಬಗ್ಗೆ ಪರಿಶೀಲಿಸಲಾಗುತ್ತದೆ.

ಗದಗ ಜಿಲ್ಲೆಯಲ್ಲಿ ಗ್ರಾಹಕರ ವೇದಿಕೆ ಪ್ರಾರಂಭ.

2393 (2837) ಶ್ರೀ ಪಾಟೀಲ್ ಡಿ.ಆರ್. (ಗದಗ್) :— ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗದಗ ಜಿಲ್ಲೆಯಲ್ಲಿ ಗ್ರಾಹಕರ ವೇದಿಕೆಯನ್ನು ಇದುವರೆವಿಗೂ ಪ್ರಾರಂಭಿಸಲು ಸಾಧ್ಯವಾಗದೇ ಇರಲು ಕಾರಣಗಳೇನು?

ಆ) ಗ್ರಾಹಕರ ವೇದಿಕೆಯನ್ನು ಗದಗ ಜಿಲ್ಲೆಯಲ್ಲಿ ಪ್ರಾರಂಭಿಸಲು ಅಗತ್ಯವಾದ ಕ್ರಮಗಳನ್ನು ಕೈಗಳ್ಳಲಾಗುವುದೇ?

ಇ) ಧಾರವಾಡ ಗ್ರಾಹಕರ ವೇದಿಕೆಯಿಂದ ಕಳೆದ ಎರಡು ವರ್ಷಗಳಲ್ಲಿ ವಿಚಾರಣೆಗಾಗಿ ಸ್ವೀಕರಿಸಲಾದ ದೂರುಗಳ ಎಷ್ಟು? ಅವುಗಳಲ್ಲಿ ಎಷ್ಟು ಪ್ರಕರಣಗಳು ವಿಚಾರಣೆಗಾಗಿ ಪೂರ್ಣಗೊಂಡಿದೆ.

ಈ) ಬಾಕಿ ಉಳಿದಿರುವ ಪ್ರಕರಣಗಳು ಎಷ್ಟು? ಅತಿ ದೀರ್ಘಕಾಲದಿಂದ ಇತ್ಯರ್ಥವಾಗದಿರುವ ಪ್ರಕರಣಗಳು ಯಾವುವು?

ಶ್ರೀ ಡಿ.ಬಿ. ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು) :—

ಭಾರತ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ರಿಟ್ ಅರ್ಜಿ ಸಂಖ್ಯೆ : 1141: 88ರಲ್ಲಿ ಸೂಚಿಸಿರುವಂತೆ ಯಾವ ಜಿಲ್ಲೆಯಲ್ಲಿ ಸರಾಸರಿ 6 ತಿಂಗಳವರೆಗೆ 150ಕ್ಕಿಂತ ಹೆಚ್ಚಿನ ಪ್ರಕರಣಗಳು ದಾಖಲಾಗಿರುತ್ತವೆಯೋ, ಅಂತಹ ಜಿಲ್ಲೆಗಳಲ್ಲಿ ಹೊಸ ಗ್ರಾಹಕರ ನ್ಯಾಯಾಲಯಗಳನ್ನು ತೆರೆಯಲು ಸೂಚಿಸಿದೆ. ಸದರಿ ನ್ಯಾಯಾಲಯದ ಆದೇಶಾನುಸಾರ, ಗದಗ ಜಿಲ್ಲೆಯಲ್ಲಿ ಸರಾಸರಿ 150ಕ್ಕಿಂತ ಕಡಿಮೆ ಪ್ರಕರಣಗಳು ದಾಖಲಾಗಿರುವುದರಿಂದ, ಗ್ರಾಹಕ ನ್ಯಾಯಾಲಯವನ್ನು ತೆರೆಯಲು ಸಾಧ್ಯವಾಗಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಧಾರವಾಡ ಜಿಲ್ಲಾ ಗ್ರಾಹಕರ ವೇದಿಕೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ ವಿಚಾರಣೆಗಾಗಿ ಸ್ವೀಕರಿಸಲಾದ ದೂರುಗಳು ಮತ್ತು ಅವುಗಳಲ್ಲಿ ವಿಚಾರಣೆಗಾಗಿ ಪೂರ್ಣಗೊಂಡಿರುವ ಸಂಖ್ಯೆಗಳು ಈ ಕೆಳಕಂಡಂತೆ ಇರುತ್ತವೆ (ದಿನಾಂಕ: 1-7-1999ರಿಂದ 30-6-2001ರವರೆಗೆ - 2 ವರ್ಷಗಳ ಅವಧಿ)

1. ವಿಚಾರಣೆಗಾಗಿ ಸ್ವೀಕರಿಸಲಾದ ದೂರುಗಳು	676
2. ವಿಚಾರಣೆಯಾಗಿ ಪೂರ್ಣಗೊಂಡ ಪ್ರಕರಣಗಳು	562

ಈ) ಬಾಕಿ ಉಳಿದಿರುವ ಪ್ರಕರಣಗಳು 94

ಅತಿ ದೀರ್ಘಕಾಲದಿಂದ ಇತ್ಯರ್ಥವಾಗದಿರುವ ಪ್ರಕರಣಗಳು 03

ಪ್ರಕರಣಗಳ ಸಂಖ್ಯೆ

1. 146.97
2. 240.97 | ಧಾರವಾಡ ಜಿಲ್ಲಾ ವ್ಯಾಪ್ತಿಗೆ ಸಂಬಂಧಪಟ್ಟ ಪ್ರಕರಣಗಳು

3. 294.97 ಗದಗ ಜಿಲ್ಲಾ ವ್ಯಾಪ್ತಿಗೆ ಸಂಬಂಧಪಟ್ಟ ಪ್ರಕರಣ.

ಎಸ್.ಪಿ.ಡಿ.ಯಲ್ಲಿ ಸಿಮೆಂಟ್ ಖರೀದಿ ದರ ನಿಗದಿಪಡಿಸುವುದು.

2395(3118) ಶ್ರೀ ಪಾಟೀಲ್ ಡಿ.ಆರ್. (ಗದಗ್) :— ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಎಸ್.ಪಿ.ಡಿ.ಯಲ್ಲಿ ಸಿಮೆಂಟ್ ಖರೀದಿ ದರ ನಿಗದಿಪಡಿಸಲಾಗಿದೆಯೇ;

ಆ) ನಿಗಧಿಪಡಿಸದಿದ್ದರೆ ನಿಗದಿ ಮಾಡಲು ಇರುವ ತೊಂದರೆಗಳೇನು;

ಇ) ಸಿಮೆಂಟ್ ದರ ನಿಗಧಿಗೊಳಿಸುವಲ್ಲಿ ಆಗಿರುವ ವಿಳಂಬದಿಂದ ಸರಕಾರಿ ಯೋಜನೆಗಳ ಅನುಷ್ಠಾನ ಕುಂಠಿತವಾಗಿಲ್ಲವೆ?

ಈ) ಸಿಮೆಂಟ್ ಖರೀದಿದರ ನಿಗಧಿಪಡಿಸಲು ಕಾಲಮಿತಿಗೆ ಒಳಪಟ್ಟು ಸರ್ಕಾರವು ಈಗಲಾದರೂ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಆರ್.ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :—

ಅ) ಹೌದು.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಹಣಕಾಸು ಅಭಿವೃದ್ಧಿ ನಿಗಮದ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ಇರುವ ಯೋಜನೆಗಳು.

2396 (3119) ಶ್ರೀ ಪಾಟೀಲ್ ಡಿ.ಆರ್. (ಗದಗ್) :— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.